3. ಇಲ್ಲದಿದ್ದಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮ.

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ) ಹೌದು

ಆ) ಹೌದು

ಇ) ಪ್ರಶ್ನೆ (2)ಕ್ಕೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಬೆಂಗಳೂರು ನಗರದಲ್ಲಿರುವ ಖೊಟ್ಟಿ ಪಡಿತರ ಚೀಟಿಗಳ ಸಂಖ್ಯೆ

254 (314) ಶ್ರೀ ಆರ್. ದಯಾನಂದರಾವ್ (ಗಾಂಧಿನಗರ):-

ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ಎಷ್ಟು ಖೊಟ್ಟಿ ಪಡಿತರ ಚೀಟಿಗಳಿರುವುದೆಂಬುದರ ಬಗೆಗೆ ಸಮೀಕ್ಷೆ ಮಾಡಲಾಗಿದೆಯೆ;

ಆ) 1992ರ ಜನವರಿ ತಿಂಗಳಿಂದ ಡಿಸೆಂಬರ್‌ದವರೆಗೆ ಎಷ್ಟು ಖೊಟ್ಟಿ ಪಡಿತರ ಚೀಟಿಗಳನ್ನು ಪತ್ತೆ ಹಚ್ಚಲಾಗಿದೆ;

ಇ) ಖೊಟ್ಟಿ ಪಡಿತರ ಚೀಟಿಗಳನ್ನು ಇಲಾಖೆಗೆ ಹಿಂದಿರುಗಿಸಲು ಯಾವುದಾದರೂ ಕರೆ ನೀಡಲಾಗಿದೆಯೆ;

ಈ) ಹಾಗಿಲ್ಲದಿದ್ದಲ್ಲಿ ಖೊಟ್ಟಿ ಪಡಿತರ ಚೀಟಿದಾರರು ತಮ್ಮ ಪಡಿತರ ಚೀಟಿಗಳನ್ನು ಹಾಕಲು ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಕಛೇರಿಗಳ ಮುಂದೆ ಸರ್ಕಾರವು ಮೊಹರಾದ ಪೆಟ್ಟಿಗೆಗಳನ್ನು ಇಡುವುದೇ;

ಉ) ಖೊಟ್ಟಿ ಪಡಿತರ ಚೀಟಿಗಳನ್ನು ಹಿಂದಿರುಗಿಸುವವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳುವುದಿಲ್ಲವೆಂದು ಸರ್ಕಾರವು ಘೋಷಿಸುವುದೇ ?

ಶ್ರೀಮತಿ ಮನೋರಮ ಮಧ್ವರಾಜ್ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):–

ಅ) ಖೊಟ್ಟಿ ಪಡಿತರ ಚೀಟಿಗಳನ್ನು ಪತ್ತೆ ಹಚ್ಚುವುದು ಇಲಾಖೆಯ ಕಾರ್ಯವಾಗಿದೆ. ಈ ಕಾರ್ಯವು ಸತತವಾಗಿ ಜಾರಿಯಲ್ಲಿರುತ್ತದೆ.

ಆ) 8814

ಇ) ಹೌದು. ಇಲಾಖಾ ಸಚಿವರಿಂದ ಪತ್ರಿಕೆಗಳಲ್ಲಿ ಈ ಬಗ್ಗೆ ಪ್ರಕಟಿಸಲಾಗಿದೆ.

ಈ) ಹೌದು ಉದ್ಭವಿಸುವುದಿಲ್ಲ

ಉ) ಇಂತಹ ಪ್ರಸ್ತಾವನೆ ಸದ್ಯದಲ್ಲಿ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ

ಶ್ರವಣಬೆಳಗೊಳದಲ್ಲಿ ಯಾತ್ರಿ ನಿವಾಸ ನಿರ್ಮಾಣ

184 (1014) ಶ್ರೀ ಜಿ. ಪುಟ್ಟಸ್ವಾಮಿಗೌಡ (ಹೊಳೆನರಸೀಪುರ):-